

## ಮೈಕ್ರೊಸಾಫ್ಟ್ ಟ್ರಾನ್ಸ್‌ಲೇಟರ್

ಗೂಗ್ಲ್ ಜೊತೆ ಪೈಪೋಟಿಗೆ ಇಳಿದಿರುವ ಮೈಕ್ರೊಸಾಫ್ಟ್ ಈಗಾಗಲೇ ವಿಂಡೋಸ್ 10 ಬಿಡುಗಡೆ ಮಾಡಿದೆ. ಇದೀಗ ಟ್ರಾನ್ಸ್‌ಲೇಟರ್ ಆ್ಯಪ್ ಬಿಡುಗಡೆ ಮಾಡಿದ್ದು, ವಿವಿಧ ಸಾಧನಗಳಲ್ಲಿ ಅಂದರೆ ಫೋನ್ ಮತ್ತು ಫ್ಯಾಬ್ಲೆಟ್‌ಗಳಲ್ಲಿ ಮಾತ್ರವಲ್ಲ, ಆ್ಯಪಲ್ ವಾಚ್‌ನಲ್ಲೂ ಬಳಸಬಹುದಾಗಿದೆ. ಇದು ಸುಮಾರು 50 ಭಾಷೆಗಳನ್ನು ಬೆಂಬಲಿಸಲಿದ್ದು, ಬರಹ ಮತ್ತು ದನಿ ಆವೃತ್ತಿಯನ್ನು ಭಾಷಾಂತರಿಸಲಿದೆ. ಬಳಕೆದಾರರು ತಮಗೆ ಬೇಕಾದ ಭಾಷೆಯ ಶಬ್ದಗಳನ್ನು ಮಾತನಾಡಬಹುದು ಅಥವಾ ಟೈಪ್ ಮಾಡಬಹುದು. ಇದಕ್ಕೆ ಪ್ರತಿಯಾಗಿ ಈ ಆ್ಯಪ್ ಆ ಶಬ್ದದ ಭಾಷಾಂತರ ರೂಪವನ್ನು ನೀಡುತ್ತದೆ. ತನ್ನ ಬಿಂಗ್ ವೆಬ್‌ಸೈಟ್ ಮೂಲಕ ಈಗಾಗಲೇ ಈ ಸೇವೆಯನ್ನು ನೀಡಿರುವ ಮೈಕ್ರೊಸಾಫ್ಟ್ ವಿಂಡೋಸ್ ಫೋನಿಗೂ ನೀಡಿತ್ತು. ಇದೀಗ ಈ ಸೇವೆ ಆ್ಯಂಡ್ರಾಯ್ಡ್ ಹಾಗೂ ಐಒಎಸ್ ನಲ್ಲೂ ಲಭ್ಯ.







## ಗೂಗ್ಲ್ ಕ್ರೋಮ್

ಇದು ಅತ್ಯಂತ ಜನಪ್ರಿಯ ಆ್ಯಪ್ ಆಗಿದ್ದು, ಮ್ಯಾಪ್, ಬರಹ, ಇತರ ಸಂಪರ್ಕ, ಫೋನ್ ನಂಬರ್‌ಗಳನ್ನು ಒಂದು ಸಾಧನದಿಂದ ನಿಮ್ಮ ಆ್ಯಂಡ್ರಾಯ್ಡ್ ಸಂಪರ್ಕವಿರುವ ಸಾಧನಗಳಿಗೆ ತಳ್ಳಬಹುದು. ಇನ್ನೊಂದು ಸಾಧನ ಆ್ಯಂಡ್ರಾಯ್ಡ್ ಸಂಪರ್ಕ ಹೊಂದಿರಬೇಕಾದ ಅಗತ್ಯವಿಲ್ಲ. ಆ್ಯಪ್ ಡೌನ್‌ಲೋಡ್ ಮಾಡಿ. ನಿಮ್ಮ ಗೂಗ್ಲ್ ಖಾತೆ ಬಳಸಿ ಲಾಗಿನ್ ಆಗಿ.

## ಟ್ವಿಲೈಟ್

ಆ್ಯಂಡ್ರಾಯ್ಡ್‌ನ ಈ ಆ್ಯಪ್ ಬ್ರೈಟ್‌ನೆಸ್ ನಿರ್ವಹಣೆ ಮಾಡುತ್ತದೆ. ಬ್ರೈಟ್‌ನೆಸ್ ನಿರ್ವಹಣೆ ಮಾಡುವ ವಿವಿಧ ಆ್ಯಪ್‌ಗಳಿದ್ದರೂ ಈ ಆ್ಯಪ್ ದಿನದ ವಿವಿಧ ಸಮಯಗಳ ಆಧಾರದ ಮೇಲೆ ನಿರ್ವಹಣೆ ಮಾಡುತ್ತದೆ. ಜೊತೆಗೆ ನೀಲಿ ಹಾಗೂ ಬಿಳಿ ಬಣ್ಣದ ತೀವ್ರತೆಯನ್ನು ಕಡಿಮೆ ಮಾಡಿ ಕಣ್ಣಿಗೆ ತೊಂದರೆಯಾಗುವುದನ್ನು ತಪ್ಪಿಸುತ್ತದೆ. ಈ ಆ್ಯಪ್‌ನಲ್ಲಿ ಕೆಂಪು ವರ್ಣದ ಫಿಲ್ಟರ್ ಇದ್ದು, ನೀಲಿ ಹಾಗೂ ಬಿಳಿ ರಂಗಿನ ಬೆಳಕಿನ ತೀವ್ರತೆಯನ್ನು ನಿರ್ವಹಿಸುತ್ತದೆ.







## ವೈಫೈ ಎನಲೈಸರ್

ವೈಫೈ ಸಂಕೇತಗಳನ್ನು ಪರಿಶೀಲಿಸುವ ಈ ಆ್ಯಪ್ ನಿಮ್ಮ ಮನೆಯಲ್ಲಿ ವೈಫೈ ನಿಧಾನವಾಗಿದ್ದರೆ ಆ ಚಾನೆಲ್ ಬ್ಯುಸಿ ಆಗಿದೆಯೇ ಎಂಬುದನ್ನು ತಿಳಿಸುತ್ತದೆ. ನೀವು ನಿಮ್ಮ ರೌಟರ್ ಮೂಲಕ ಇನ್ನೊಂದು ಚಾನೆಲ್‌ಗೆ ಬದಲಾಯಿಸಬಹುದು. ಇದರಿಂದ ವೈಫೈ ಸಂಕೇತಗಳು ಶೀಘ್ರ ಲಭಿಸುತ್ತವೆ.

■ ಎಸ್. ತುಂಬೆ